ಮತ್ತು ಮಂಡ್ಯ ನಡುವಿನ 66 ಕೆವಿ ಡಬಲ್ ಸರ್ಕ್ಯೂಟ್ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವು ತೀವ್ರ ಪ್ರಗತಿಯಲ್ಲಿದ್ದು, ಮೇ 1995ರ ಅಂತ್ಯದೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಅಲ್ಲದೇ ಮೈಸೂರು ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಮೈಸೂರು ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂಮೆಂಟ್ ಸ್ಕೀಂನ ಅಡಿಯಲ್ಲಿ ದೊಡ್ಡಕೆರೆ ಮೈದಾನದಲ್ಲಿ ಒಂದು 66:11 ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ, ಮೇಟಗಳ್ಳಿ, ಎಫ್‌ಟಿಎಸ್, ರಾಮಕೃಷ್ಣನಗರ, ಮೈಸೂರು ಸೌತ್, ಹೂಟಗಳ್ಳಿ (11:11 ಕೆವಿ)ಗಳಲ್ಲಿರುವ ವಿದ್ಯುತ್ ಬಸ್ ಸ್ಟೇಷನ್‌ಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು, 4.6 ಕೆವಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು 11 ಕೆವಿಗೆ ಪರಿವರ್ತಿಸುವುದು, ಹೆಚ್ಚುವರಿ 11 ಕೆವಿ ಮಾರ್ಗಗಳ ನಿರ್ಮಾಣ ಮತ್ತು ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಕೇಂದ್ರಗಳ ಸ್ಥಾಪನೆ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲು ಉದ್ದೇಶಿಸಿದೆ. ಈ ಕಾರ್ಯಗಳಿಗಾಗಿ ವಿಷಿಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಆರ್ಥಿಕ ನೆರವನ್ನು ಪಡೆಯಲಾಗುತ್ತಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ವಿಷಿಯನ್ ಬ್ಯಾಂಕ್‌ನಿಂದ ಯಾವತ್ತು ನೆರವು ಪಡೆದುಕೊಳ್ಳುತ್ತೀರಿ? ಯಾವತ್ತೂ ನಮ್ಮ ಕರ್ನಾಟಕದ್ದು ಕಾಡಿ ಬೇಡಿ ಪಡೆಯುವುದೇ ಆಯಿತು. ವಿಷಿಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ತರುವುದು ಏನೂ ಬೇಡ. ಇರತಕ್ಕ ಸಂಪನ್ಮೂಲದಿಂದಲೇ ಕೆಲಸ ಮಾಡುವುದಕ್ಕಾಗುವುದಿಲ್ಲವೇ?

(ಗೊಂದಲ)

ಅಧ್ಯಕ್ಷರು : ನಿಮ್ಮಂಥವರು ಬರಬೇಕು ಸುಧಾರಣೆ ಆಗಬೇಕು. ದಯಮಾಡಿ ಕುಳಿತುಕೊಳ್ಳಿ, ಜಾಸ್ತಿ ಮಾತನಾಡಿದರೆ ಮೈಕ್‌ನಲ್ಲಿ ವೋಲ್ಟೇಜ್ ಜಾಸ್ತಿ ಆಗುತ್ತದೆ, ದಯವಿಟ್ಟು ಕುಳಿತುಕೊಳ್ಳಿ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

854 - ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಪ್ರವಾಸಿ ಕೇಂದ್ರಗಳನ್ನು ಸರ್ಕಾರದವರು ಗುರುತಿಸಿದ್ದಾರೆ?

ಆ) ಈ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮ ಏನು?

ಇ) ಇಲ್ಲಿಯವರೆಗೆ ಖರ್ಚಾಗಿರುವ ಹಣ ಎಷ್ಟು? ಮತ್ತು ಯಾವ ಯಾವ ಪ್ರವಾಸಿ ಕೇಂದ್ರಗಳಿಗೆ ಖರ್ಚಾಗಿದೆ?

ಶ್ರೀ ಜಿ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 17 ಪ್ರಮುಖ ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದೆ.

ಆ) ರಾಜ್ಯದ ಪ್ರವಾಸೋದ್ಯಮ ನೀತಿಯ ಪ್ರಕಾರ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತೆ ರಾಜ್ಯ ಸರ್ಕಾರವು ಖಾಸಗಿ ಉದ್ದಿಮಿಗಳನ್ನು ಉತ್ತೇಜಿಸುತ್ತದೆ.

ಉದಾಗ್ಯೂ, ಈ ಕೆಳಕಂಡ ಪ್ರವಾಸೋದ್ಯಮ ಯೋಜನೆಗಳನ್ನು ರಾಜ್ಯ ಸರ್ಕಾರವು ಕೇಂದ್ರದ ಆರ್ಥಿಕ ನೆರವಿನಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗೊಂಡಿದೆ.

1) ಚಿಕ್ಕಮಗಳೂರಿನಲ್ಲಿ ಹೆದ್ದಾರಿ ಸೌಲಭ್ಯದ ನಿರ್ಮಾಣ

2) ಶೃಂಗೇರಿಯಲ್ಲಿ ಯಾತ್ರಿ ನಿವಾಸ ನಿರ್ಮಾಣ

3) ಶೃಂಗೇರಿಯಲ್ಲಿ ಪ್ರವಾಸಿ ಸೌಲಭ್ಯ ನಿರ್ಮಾಣ

4) ಶೃಂಗೇರಿಯಲ್ಲಿ ಸುಲಭ್ ಶೌಚಾಲಯ ನಿರ್ಮಾಣ

5) ಬಾಬಾಬುಡನ್‌ಗಿರಿಯಲ್ಲಿ ಸುಲಭ್ ಶೌಚಾಲಯ ಸಂಕೀರ್ಣ (ಪೂರ್ಣಗೊಂಡಿದೆ)

6) ಕೆಮ್ಮಣ್ಣು ಗುಂಡಿಯಲ್ಲಿ ಹಿಲ್ ಕಾಟೇಜ್ ನಿರ್ಮಾಣ

7) ಕೆಮ್ಮಣ್ಣು ಗುಂಡಿಯಲ್ಲಿ ಸಾಹಸ ಪ್ರವಾಸೋದ್ಯಮ ಕೇಂದ್ರ ಸ್ಥಾಪಿಸುವ ಯೋಜನೆ

ಇ) ಈ ಕೆಳಕಂಡ ಯೋಜನೆಗಳಿಗೆ ವೆಚ್ಚ ಮಾಡಿದ ವಿವರ ಈ ಕೆಳಕಂಡಂತಿದೆ

		ಲಕ್ಷ ರೂ.
1)	ಚಿಕ್ಕಮಗಳೂರಿನಲ್ಲಿ ಹೆದ್ದಾರಿ ಸೌಲಭ್ಯ	24.90
2)	ಶೃಂಗೇರಿಯಲ್ಲಿ ಯಾತ್ರಿನಿವಾಸ	18.36
3)	ಶೃಂಗೇರಿಯಲ್ಲಿ ವಿಶ್ರಾಂತಿ ಮತ್ತು ಉಪಹಾರ ಗೃಹ	5.91
4)	ಬಾಬಾಬುಡನ್‌ಗಿರಿಯಲ್ಲಿ ಸುಲಭ್ ಶೌಚಾಲಯ ನಿರ್ಮಾಣ	15.17
5)	ಕೆಮ್ಮಣ್ಣಗುಂಡಿಯಲ್ಲಿ ಸಾಹಸ ಪ್ರವಾಸೋದ್ಯಮ ಕೇಂದ್ರ ಸ್ಥಾಪನೆ	5.00

ಶ್ರೀ ಸಿ.ಆರ್. ಸಗೀರ್ ಅಹಮದ್ : ನನಗೆ ಉತ್ತರವನ್ನು ಒದಗಿಸಿರುವುದರಲ್ಲಿ 17 ಪ್ರಮುಖ ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದೆ ಎಂದು ಹೇಳಿದ್ದಾರೆ, ವಿವರ ನೀಡುವುದರಲ್ಲಿ ಕೇವಲ 7 ಪ್ರವಾಸಿಕೇಂದ್ರಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಉಳಿದಂಥ 10 ಪ್ರವಾಸಿ ಕೇಂದ್ರಗಳು ಯಾವುವು? ಇದರ ಜೊತೆಗೆ ಈ ಸಾಲಿನಲ್ಲಿ ಖರ್ಚು ಆಗಿರುವಂಥ ಹಣದ ವಿವರವನ್ನು ನೀಡಿರುತ್ತಾರೆ. ಆದರೆ ಉಪ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಉಪ ಪ್ರಶ್ನೆ ಏನೆಂದರೆ ಅನೇಕ ಪ್ರವಾಸಿ ಕೇಂದ್ರಗಳಲ್ಲಿ ಇವತ್ತು ನಾಗರಿಕ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದ್ದೆಯೋ? ಮೊದಲನೆಯದಾಗಿ ರಸ್ತೆ ಅಭಿವೃದ್ಧಿ ಬಗ್ಗೆ ಸರ್ಕಾರ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆಯೇ? ಎರಡನೆಯದಾಗಿ ಬೀದಿ ದೀಪಗಳನ್ನು ಅಳವಡಿಸುವುದರ ಬಗ್ಗೆ ಸರ್ಕಾರ ಏನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆಯೋ? ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆಗಾಗಿ ಯಾವುದಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೋ? ಮತ್ತು ಜೊತೆಗೆ ಈ ವರ್ಷ ಹೊಸದಾಗಿ ಯಾವುದಾದರೂ ಪ್ರವಾಸಿ ಕೇಂದ್ರಗಳಿಗೆ ತಮ್ಮ ಅನುಮತಿಯನ್ನು ಕೊಟ್ಟಿದ್ದಾರೆಯೇ ಎನ್ನುವಂಥದ್ದನ್ನು ತಿಳಿಸಬೇಕು.

ಶ್ರೀ ಜೆ.ಹೆಚ್. ಪಟೇಲ್ : ಚಿಕ್ಕಮಗಳೂರು ಜಿಲ್ಲೆಯಲ್ಲಿರತಕ್ಕಂತಹ ಪ್ರವಾಸಿಕೇಂದ್ರಗಳು, ಮುಳ್ಳಯ್ಯನಗಿರಿ, ಬಾಬಬುಡನಗಿರಿ, ಹಿರೇಕೆರೂರು, ಸುತ್ತೋಡಿ, ಪಕ್ಷಿಧಾಮ, ಕೆಮ್ಮಣ್ಣಗುಂಡಿ, ಅಮೃತಪುರ, ಭದ್ರಾ ಪ್ರಜೆಕ್ಟ್, ಕಳಸ, ಹೊರನಾಡು, ಕುದುರೆಮುಖ, ಅಂಗಡಿ ಬಲ್ಲರಾಯನಪುರ ಇದು ಎಲ್ಲಾ ಅಭಿವೃದ್ಧಿ ಹೊಂದಿದೆ ಎಂದು ಅಲ್ಲ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಇವುಗಳನ್ನೆಲ್ಲಾ ಅಭಿವೃದ್ಧಿ ಮಾಡಲು ರೋಡ್, ಅಲ್ಲಿಗೆ ಬರತಕ್ಕಂತಹ ಪ್ರವಾಸಿಗರಿಗೆ ಸವಲತ್ತುಗಳನ್ನು ನಿರ್ಮಾಣ ಮಾಡುವುದೇ ಸರ್ಕಾರದ ಉದ್ದೇಶವಾಗಿದೆ. ಈಗ ಬಹುತೇಕ ಸ್ಥಳಗಳಲ್ಲಿ ಸರ್ಕಾರವೇ ನೇರವಾಗಿ

ಅಭಿವೃದ್ಧಿ ಮಾಡುವುದಕ್ಕಿಂತ ಈ ಪ್ರವಾಸಿ ಕೇಂದ್ರಗಳನ್ನು ಯಾರು ಸುಧಾರಣೆ ಮಾಡಿ ಅಲ್ಲಿ ಹೆಚ್ಚಿನ ಪ್ರವಾಸಿಗರು ಬರುವ ಹಾಗೆ ಮಾಡುತ್ತೇವೆಂದು ಖಾಸಗಿಯವರು ಮುಂದೆ ಬಂದರೆ ಅಂಥಹ ಖಾಸಗಿಯವರಿಗೆ ಅವುಗಳನ್ನು ಬಿಟ್ಟುಕೊಟ್ಟು ಅಭಿವೃದ್ಧಿ ಮಾಡಿಸಬೇಕೆಂದು ತೀರ್ಮಾನ ಮಾಡಿದೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಈಗಾಗಲೇ ತಾವು ತೆಗೆದುಕೊಂಡಿರುವ ಪ್ರವಾಸಿ ಕೇಂದ್ರಗಳ ಸಮರ್ಪಕವಾದ ಸೌಕರ್ಯಗಳನ್ನು ಕಲ್ಪಿಸಿಕೊಡುವ ಕೆಲಸ ಯಶಸ್ವಿಯಾಗಿ ನಡೆದಿಲ್ಲ. ಇವತ್ತು ಇರುವಂತಹ ಪ್ರವಾಸಿಕೇಂದ್ರಗಳಲ್ಲಿ ಎಷ್ಟು ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ ಎಂದರೆ ರಸ್ತೆ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಿ ಈ ಇಲಾಖೆಗೆ ನೀಡಬೇಕಾಗಿರುವ ಬಗ್ಗೆ ಸರ್ಕಾರ ಏನಾದರೂ ಭರವಸೆ ಕೊಡುತ್ತೆರೆಯೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಪ್ರವಾಸಿ ಕೇಂದ್ರಗಳ ಹತ್ತಿರ ಪ್ರವಾಸಿ ಹೊಟೇಲ್‌ಗಳಿವೆ ಮತ್ತು ಪ್ರವಾಸಿ ಮಂದಿರಗಳಿವೆ, ನಾನು ಬಹಳ ಹಿಂದೆ ನಿಮ್ಮ ಪ್ರವಾಸೋದ್ಯಮ ಇಲಾಖೆಗೆ ಸೇರಿದಂತಹ ಕೆಮ್ಮಣ್ಣಗುಂಡಿ ಹತ್ತಿರದಲ್ಲಿರುವ ಒಂದು ಪ್ರವಾಸಿಕೇಂದ್ರಕ್ಕೆ ಹೋಗಿದ್ದೆ. ಅಲ್ಲಿ ನಿಮ್ಮ ಪ್ರವಾಸಿ ಅತಿಥಿ ಗೃಹದಲ್ಲಿ ತಿಗಣೆ, ಜಿರಲೆ, ಸೊಳ್ಳೆ ಒಡೆದುಹೋದಂಥ ಬಲ್ಬುಗಳು ಮತ್ತು ನೀರು ಸುರಿಯುತ್ತಿರುವಂಥ ಕೊಳಾಯಿತು ಇವುಗಳೆಲ್ಲಾ ಅಲ್ಲಿ ಇದೆ. ಇದು ಎಲ್ಲಾ ಪ್ರವಾಸಿ ಗೃಹಗಳ ಹಣೆಬರಹಗಳು. ಇನ್ನೂ ಪ್ರವಾಸಿ ಹೊಟೇಲ್‌ಗಳು ಅಂದರೆ ನಾವು ತಿನ್ನದೇ ಇರತಕ್ಕಂತಹ ತಿಂಡಿಗಳನ್ನೆಲ್ಲಾ ಅಲ್ಲಿ ಮಾಡುತ್ತಾರೆ. ಇದರಿಂದ ಪ್ರವಾಸಿಗರಿಗೆ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ನಿಮ್ಮ ಕಾಲದಲ್ಲಿಯಾದರೂ ಪ್ರವಾಸಿಗರಿಗೆ ಅನುಕೂಲಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಜೆ.ಹೆಚ್. ಪಟೇಲ್ : ಆ ಉದ್ದೇಶದಿಂದಲೇ ಹಿಂದಿನ ಸರ್ಕಾರ ತಿಗಣೆಗಳನ್ನು, ಸೊಳ್ಳೆಗಳನ್ನು ಬೆಳೆಸಿದ್ದು ತಪ್ಪು ಎಂದು ಹೇಳಿ ಈ ಸರ್ಕಾರ ಹೊಸ ವಿದೇಶಿಯನ್ನು, ನಮ್ಮ ವಾಟಾಳ್ ನಾಗರಾಜ್‌ರವರಂಥ ಪ್ರವಾಸಿಗರು ಬರಲಿ ಎಂದು ಈ ಅಭಿವೃದ್ಧಿ ಮಾಡುತ್ತಾ ಇದ್ದೇವೆ.

ಬಾಗೇಪಲ್ಲಿ ಮತ್ತು ಸೋಮನಾಥಪುರದ ವಿದ್ಯುತ್ ಲೈನ್‌ಗಳ ಬದಲಾವಣೆ

917ಸಿ - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಾಗೇಪಲ್ಲಿ ಮತ್ತು ಸೋಮನಾಥಪುರ ವಿಭಾಗಗಳಿಗೆ ವಿದ್ಯುತ್ ಸರಬರಾಜು ಲೈನುಗಳನ್ನು ಹಾಕಿ ಎಷ್ಟು ವರ್ಷಗಳಾಗಿವೆ. ಆ ವಿದ್ಯುತ್ ಲೈನಿಗೆ ವಿದ್ಯುತ್ ಸರಬರಾಜು ಮಾಡುವ ಶಕ್ತಿ ಈಗ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಆ ವಿದ್ಯುತ್ ಲೈನಿನ ಬದಲಾವಣೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಗೌರಿಬಿದನೂರು - ಬಾಗೆಪಲ್ಲಿ ವಿದ್ಯುತ್ ಲೈನು ಬಹಳ ಹಳೆಯ ಲೈನಾಗಿದ್ದು ಸುಮಾರು 25 ವರ್ಷಕ್ಕೂ ಮೇಲ್ಪಟುಷ್ಟು ಹಳೆಯದಾಗಿದೆ. ಬಾಗೇಪಲ್ಲಿ - ಸೋಮನಾಥಪುರ ಲೈನನ್ನು ನಿರ್ಮಾಣ ಮಾಡಿ ಸುಮಾರು 12 ವರ್ಷವಾಗಿದೆ. ಗೌರಿಬಿದನೂರು - ಬಾಗೇಪಲ್ಲಿ - ಸೋಮನಾಥಪುರ ವಿದ್ಯುತ್ ಲೈನು ಓವರ್‌ಲೋಡ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.